(72)

# ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/56/2015-16 ದಿ:27-05-2016

**ವಾದಿಗಳು**

1.ಪಿ.ಆನಂದ ತಂದೆ ಸೋಮಶೇಖರಪ್ಪ
2.ದೊಡ್ಡ ಗಂಗಾಧರ ತಂದೆ ಲೇಟ್ ಲಿಂಗಪ್ಪ
ರಾವಿಹಾಳು ಗ್ರಾಮ.
ಸಿರುಗುಪ್ಪ ತಾಲೂಕು.

**ವಿರುದ್ಧ**

**ಪ್ರತಿವಾದಿಗಳು**

1.ಕೆ.ಎಂ.ಶಿವರಾಮಲಿಂಗಪ್ಪ ತಂದೆ
-ಲೇಟ್ ಕೆ.ಎಂ.ಮಲ್ಲಪ್ಪ.
2.ಸೋಮಶೇಖರಪ್ಪ@ ಕೊತ್ತೂರು
ಸೋಮಶೇಖರ ತಂದೆ ಕೊತ್ತೂರ
ಮಾಣಿಕ್ಯಪ್ಪ, ಬುರುಜುಲು ಗ್ರಾಮ
ಪತ್ತಿಕೊಂಡ ತಾಲೂಕು, (ಎ.ಪಿ)

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ರಾವಿಹಾಳು | 453/ಬಿ | 2-58 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ರಾವಿಹಾಳು ಗ್ರಾಮದ ಸ,ನಂ.453/ಬಿ ವಿ:2-58 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಸೋಮಶೇಖರಪ್ಪ ಹೆಸರಿಗೆ ಪಟ್ಟಾ ಇದ್ದು, ಇವರು ನೋಂದಣಿ ಕ್ರಯಪತ್ರ ಸಂಖ್ಯೆ:5355/2015-16 ದಿ:06-11-2015 ರ ಪ್ರಕಾರ ಕೆ.ಎಂ.ಶಿವರಾಮಲಿಂಗಪ್ಪ ತಂದೆ ಲೇಟ್ ಕೆ.ಎಂ.ಮಲ್ಲಪ್ಪ ಇವರಿಗೆ ರೂ,1,42,000/-ಗಳಿಗೆ ಮಾರಾಟ ಮಾಡಿದ್ದು, ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಕ್ರಮ ಜರುಗಿಸಲು ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ.ರಾವಿಹಾಳು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ **1.ಪಿ.ಆನಂದ ತಂದೆ ಸೋಮಶೇಖರಪ್ಪ ಮತ್ತು 2.ದೊಡ್ಡ ಗಂಗಾಧರ ತಂದೆ ಲೇಟ್ ಲಿಂಗಪ್ಪ** ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿ:15-12-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ.ಬು.ಸಂಖ್ಯೆ:41/2015-16 ದಿನಾಂಕ:16-12-2015 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:28-03-2016 ಮತ್ತು

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರವರ ನ್ಯಾಯಾಲಯ

18-04-2016 ರಂದು ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ (1) ಪಿ.ಆನಂದ ಮಾತ್ರ ಹಾಜರು. ಪ್ರತಿವಾದಿಗಳು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಲಾಗಿ, ಮೊದಲಿಗೆ ರಾವಿಹಾಳು ಗ್ರಾಮದ ಸ.ನಂ.453/ಬಿ ವಿ:2-58 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಸೋಮಶೇಖರಪ್ಪ ಹೆಸರಿಗೆ ಪಟ್ಟಾ ಇದ್ದು, ಇವರು ನೋಂದಣಿ ಕ್ರಯಪತ್ರ ಸಂಖ್ಯೆ:5355/2015-16 ದಿ:06-11-2015 ರ ಪ್ರಕಾರ ಕೆ.ಎಂ.ಶಿವರಾಮಲಿಂಗಪ್ಪ ತಂದೆ ಲೇಟ್ ಕೆ.ಎಂ.ಮಲ್ಲಪ್ಪ ಇವರಿಗೆ ರೂ.1,42,000/-ಗಳಿಗೆ ಮಾರಾಟ ಮಾಡಿದ್ದು, ನಂತರ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ತಕರಾರು ಬಂದಿದ್ದು ಮತ್ತು ಸದ್ರಿ ಕ್ರಯ ವ್ಯವಹಾರವನ್ನು ನೋಂದಣಿ ವಿಕ್ರಯ ರದ್ದು ಪತ್ರ ಸಂ:7133/2015-16 ದಿ:20-01-2016 ರ ಪ್ರಕಾರ ರದ್ದುಪಡಿಸಿಕೊಂಡ ದೃಢೀಕೃತ ದಾಖಲೆ ಹಾಜರುಪಡಿಸಿರುವುದರಿಂದ, ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/56/2015-16** **ದಿ:27-05-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ರಾವಿಹಾಳು ಗ್ರಾಮದ ಸ.ನಂ.453/ಬಿ ವಿ:2-58 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಸೋಮಶೇಖರಪ್ಪ ಹೆಸರಿಗೆ ಪಟ್ಟಾ ಇದ್ದು, ನೋಂದಣಿ ಕ್ರಯಪತ್ರ ಸಂಖ್ಯೆ:5355/2015-16 ದಿನಾಂಕ: 06-11-2015 ರ ಪ್ರಕಾರ ಆಗಿರುವ ಕ್ರಯ ವ್ಯವಹಾರವನ್ನು ನೋಂದಣಿ ವಿಕ್ರಯ ರದ್ದು ಪತ್ರ ಸಂ:7133/2015-16 ದಿ:20-01-2016 ರ ಪ್ರಕಾರ ರದ್ದುಪಡಿಸಿಕೊಂಡ ಮೇರೆಗೆ ಸದರಿ ಹಕ್ಕು ಬದಲಾವಣೆ ಪ್ರಕರಣವನ್ನು ಈ ಹಂತದಲ್ಲಿ ಮುಕ್ತಾಯಗೊಳಿಸಲು ಮತ್ತು ಹಾಲಿ ಪಹಣಿಯಲ್ಲಿನ ನಮೂದುಗಳನ್ನು ಯಥಾರೀತಿ ಮುಂದುವರೆಸಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:27-05-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

ತಹಶೀಲ್ದಾರರು,ಸಿರುಗುಪ್ಪ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರವರ ನ್ಯಾಯಾಲಯ

ನ.
1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ

P. ಆನಂದ